ರಾಮಚಂದ್ರ ಕೂಡ ಚಂದ್ರವತಿ ಜೊತೆ ನಕ್ಕಿದ್ದು ಇದೆ. ಇಂಥ ಚಂದ್ರವತಿಯ ನವ ಮಾಸದ ಹೊಟ್ಟೆಯಲ್ಲಿ ರಾಮಚಂದ್ರನ ತಂಗಿಯಿದ್ದಳಂತೆ. ಮುಂಜಾನೆಯಿಂದ ನಡುಬ್ಯಾನೆ ಬುಟ್ಟು ಬುಟ್ಟು ಬರ್ತಿತ್ತು ಚಂದ್ರವತಿಗೆ. ಛಟ್ಟಿ ಅಮಾಸಿಗೆ ಒಂಬತ್ತು ತಿಂಗಳು ಹೋಗಿದ್ದರೂ ಇನ್ನೂ ಹಡೆವ ಯಾವ ಲಕ್ಷಣ ಇದ್ದಿಲ್ಲ. ಆದರೆ, ಆ ದಿನ ನಸುಕಿನಿಂದ ನಡುಬ್ಯಾನೆ ಶುರುವಾಗಿದ್ದವು. ಹತ್ತಿ ಕಳೆವು ಹೊಲದಲ್ಲಿ ಬಹಳ ಬೆಳೆದಿತ್ತು. ಜುಲುಮಿಲೆ ಬುತ್ತಿ ಕಟ್ಟಿಕಂಡು ರೆಡಿಯಾದಳು. ಅರ್ಧತಾಸಿಗೊಮ್ಮೆ ಮುಳ್ಳು ಚುಚ್ಚಿದಾಗ ಅಳುಕುವಂತೆ ಬ್ಯಾನೆ ಬಂದು ಬಂದುಹೋಗುತ್ತಿತ್ತು. ಹೊಲದಲ್ಲಿ ಆಗಲೇ ಕೂಲಿಯಾಳುಗಳು ಬಂದು ಕೆಲಸ ಶುರುಹಚ್ಚಿಕೊಂಡಿದ್ದರು. ಬುತ್ತಿ ಬೇವಿನಮರದ ಕೆಳಗಿಟ್ಟು ಉಸ್ಸ್ ಅಂತ ಕುಂತ ಚಂದ್ರವತಿ, ಸುಡು ಸುಡು ಬಿಸಿಲಿನ ಜಳಕ್ಕೆ ಕಿತ್ತು ಬರುತ್ತಿದ್ದ ಬೆವರನ್ನು ಸೆರಗಿನಿಂದ ಒರಸಿಕೊಳ್ಳುತ್ತ ತಲೆಗೆ ಬಟ್ಟೆ ಕಟ್ಟಿಕಂಡು ಹೊಲದಲ್ಲಿ ಬಂದಳು.

'ಇವತ್ತೋ ನಾಳೆನೋ ಹಡೆಂಗಾ ಕಾಣ್ತೇದಿ, ಯಾಕ ಬರಾಕ ಹೋದಿ, ನಮ್ ಮಾವನ ಕಳಿಸಬಾರದೇನು' ಅಂತ ಬುಡ್ಡ ಲಚುಮನ ಹೆಂಡತಿ ಪಾರ್ವತಿ ಅಂದಾಗ, ಚಂದ್ರವತಿ ಕುರ್ಚಿಲಿ ಹತ್ತಿ ಬುಡದಲ್ಲಿನ ಕಳೆವು ತೆಕ್ಕಂತಾ 'ನಿಮ್ ಮಾವನ ಕತಿ ನಿನಗಾ ಗೊತ್ತಿರಲಾರದೆನಲ್ಲಾ. ಮುಂಜಾನೆ ಎದ್ದು ಹೋಗ್ಯಾನ ಎಲ್ಲಿ ಕುಡಕಂತಾ ಬಿದ್ದನೆನೋ, ಮಕ್ಕಳು ಹೆಂಡರಂಬ ಖಬರಿದ್ರಲ್ಲ ಅವಕ್ಕ' ಅಂತ ಬೈದು ಕೈಯಲ್ಲಿದ್ದ ಕುರ್ಚಿ ಬಿಸಾಕಿ 'ಅಮ್ಮಾ' ಅಂತಾ ಚೀರಿ ಮಾರಿ ಕಿವಚಿಕೊಂಡು ಹೊಟ್ಟೆ ಹಿಡಿದುಕೊಂಡು ಮಲಗಿದಳು.

ಹತ್ತಿ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಹೆಣ್ಮಕ್ಕಳೆಲ್ಲ 'ಏನಾಯ್ತು? ಯಾಕ ಬರಾಕ ಹೋದಿ ಇಂಥ ವ್ಯಾಳ್ಯಾಗ?' ಅಂತ ಚಂದ್ರವತಿನ ಎಬ್ಬಿಸಿ ಗಿಡದ ನೆರಳಿಗೆ ಕುಂದ್ರಿಸಿದರು. 'ಯಕ್ಕಾ ನೀ ಮನಿಗೆ ಹೋಗು. ನಿನ್ ಜೊತೆ ನಾ ಬರ್ತಿನಿ' ಅಂತ ಪಾರ್ವತಿ ಅಂದಾಗ, ಎಲ್ರೂ ಹೌದು ಅಂತ ಗೋಣು ಹಾಕಿ ಚಂದ್ರವತಿನ ಮನಿಗೆ ಕಳಿಸುವುದಕ್ಕೆ ಒಪ್ಪಿಸಿದರು. ಆದರೆ, ಹೆರಿಗೆ ಬ್ಯಾನಿ ಹೆಚ್ಚಾಗಿ ಹೊಲದಲ್ಲೇ ರಾಮಚಂದ್ರನ ತಂಗಿ ಮಲ್ಲಮ್ಮನ ಹಡೆದಿದ್ದಳು. ಅಲ್ಲಿನ ಮಂದಿ ತಾಯಿ ಮಗಳ ಹೊಕ್ಕಳುಬಳ್ಳಿ ಸಮೇತ ಮನೆಗೆ ತಂದು ಬಿಟ್ಟು ಹೋಗಿದ್ದರು. ಸೂಲಿಗಿತ್ತಿ ಸಲೀಂ ದೊಡಮ್ಮ ಬಂದು ಬ್ಲೇಡಿಲಿ ತಾಯಿ ಮಗಳ ಹೊಕ್ಕಳ ಬಳ್ಳಿ ಕಟ್ ಮಾಡಿ, 'ಯವ್ವಾ ಎಷ್ಟು ಬಂಗಾರ ಆಗಿದ್ದಿ, ಅದ್ವಾನ ಅರಣ್ಯದಾಗ ಚಂದ್ರವತಿ ಹೊಟ್ಟೆಯಿಂದ ಹೊರಗಾ ಬಂದಿದ್ದಿ, ತಾಯಿಗ ಕಷ್ಟ ಕೊಡಬ್ಯಾಡ, ಸತ್ತು ಬದುಕ್ಯಾಳ ನೋಡು ಚಂದ್ರವತಿ' ಅಂತ ಮಗುವಿನ ನೋಡುತ್ತಾ ಲಟಿಗೆ ಮುರಿದು ಪೆಪ್ಪರಮಿಂಟಾಯಿ ಬಾಯಿಗೆ ಹಾಕಿಕೊಂಡಂತೆ ಚೆಂದದ ಮುದ್ದು ಕೊಟ್ಟು ಖುಷಿಪಟ್ಟಳು.

ಹಡೆದ ಮೇಲೆ ಚಂದ್ರವತಿ ಜೀವಕ ಸಮಾಧಾನವಾಗಿತ್ತು. ಗಂಡ ಬೆಳಗ ಮುಂಜಾನೆ ಹೋದಾತ ಇನ್ನೂ ಬಂದಿರಲಿಲ್ಲ. ಹುಟ್ಟಿದ ಕೂಸು ತಣ್ಣಗೆ ಮಲಗಿಕೊಂಡಿತ್ತು. ಆ ರಾತ್ರಿಯೆಲ್ಲ ಚಂದ್ರವತಿ ತನ್ನ ದೊಡ್ಡ ಇಬ್ಬರು ಮಕ್ಕಳು ಹಾಗೂ ಈ ಹಸುಗೂಸಿನ ಜೊತೆ ಗಂಡ ಬಂದಿಲ್ಲವೆಂಬ ಆತಂಕದಲ್ಲೇ ಕಳೆದಿದ್ದಳು. ಮುಂಜಾನೆ ಬಂದ ಗಂಡನ ಕೈಯಲ್ಲಿ ಎರಡು ಪ್ಲೇಟ್ ಪೂರಿ ಚಟ್ನಿ ಇತ್ತು. ಯಾರೋ ಬರುವ ದಾರಿಯಲ್ಲೇ ಹೇಳಿದ್ದರು ಅಂತ ಕಾಣುತ್ತೆ, ಮಗಳು ಹುಟ್ಟಿರುವ ವಿಚಾರ.

'ನಿನ್ನೆ ಹೋದಾತ ಇವತ್ತು ಬಂದಿದ್ದಿ. ಸ್ವಲ್ಪನ ಬುದ್ಧಿ ಗಿದ್ಧಿ ಐತಾ ನಿನಗಾ. ನಿನ್ನೆಯಿಂದ ಒಬ್ಬಾಕಿನೆ ಈ ಬಸರು ಹೊಟ್ಟೆ ಇಟ್ಟುಕಂಡು ಎಷ್ಟು ತ್ರಾಸು ಅನುಭವಿಸಿನಿ ನನಗಾ ಗೊತ್ತು, ದೇವರಂಥ ಜನರು, ಸಲೀಂ ದೊಡಮ್ಮ ನನ್ನ ಪಾಲಿಗೆ ಬಂದು ಜೀವ ಕಾಪಾಡ್ಯಾರ. ನಿನ್ನೆಯಿಂದ ಸರಿಗಿ ಏನೂ ತಿಂದಿಲ್ಲ. ಬಾಳಾ ಹಸಿವು ಆಗ್ಯಾದ. ಏನಾರ ತಗೊಂಡು ಬಾ' ಅಂತ ತುಂಬಾ ಸಂಕಟದಿಂದ ಚಂದ್ರವತಿ ಹೇಳಿದಾಗ, ಗಂಡನಿಗೆ ಜೀವ ಚುರುಕ್ ಎನಿಸಿ, ನಾಚಿಕೆ ಬಂದಾಗಾಗಿ ಕಟ್ಟಿಸಿಕೊಂಡು ಬಂದಿದ್ದ ಪೂರಿ ಚಟ್ನಿನ ಚಂದ್ರವತಿಗೆ ಕೊಟ್ಟನಂತೆ. ಚಂದ್ರವತಿ ಸಮಾಧಾನದಿಂದ ಗಂಡ ತಂದಿದ್ದ ನಾಲ್ಕೇ ನಾಲ್ಕು ಪೂರಿನ ಶತಮಾನದಿಂದ ಏನೂ ತಿಂದೇ ಇಲ್ಲವೆನ್ನುವಂತೆ ಗಬಗಬ ತಿಂದು ಕೈತೊಳೆದುಕೊಂಡಿದ್ದಳಂತೆ.

ಬೆಳೆದು ದೊಡ್ಡದಾದ ಈ ಹಸುಗೂಸು, ನಾಲ್ಕು ವರ್ಷದ ನಂತರ ಚಂದ್ರವತಿ ಬಟ್ಟೆ ಒಗೆಯಲು ಕಾಲುವೆಗೆ ಹೋದಾಗ ಎಷ್ಟು ಹೇಳಿದರೂ ಬಿಡದೆ ಚಂದ್ರವತಿಯ ಹಿಂದೆ ಅಳುತ್ತಾ ಬಂದಿತ್ತು.